**ಎಂ ವಿ ಸಿ 533/2024 ಪಿಡಬ್ಲ್ಯೂ 1**

**ಸಾಕ್ಷಿಯನ್ನು ದಿ: 21.07.2026 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಕೆ ಪಿ ಕೆ ವಕೀಲರ ಪರವಾಗಿ ಶ್ರೀ ಎಂ ಜಿ ಎಸ್ ವಕೀಲರಿಂದಃ**

ನಾನು ಈಗ ವ್ಯವಸಾಯ ಮಾಡುತ್ತಿದ್ದೇನೆ. ನನಗೆ ಒಂದೂವರೆ ಎಕರೆ ಜಮೀನು ಇದೆ. ಆ ಜಮೀನಿನ ಆರ್ ಟಿ ಸಿ ಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಆರ್ ಟಿ ಸಿ ನಮ್ಮ ತಾಯಿ ಹೆಸರಿನಲ್ಲಿ ಇದೆ. 0.01 ವರೆ ಎಕರೆ ಜಮೀನಿನಲ್ಲಿ ರಾಗಿ ಭತ್ತ ಮತ್ತು ಹೂವು ಬೆಳೆಯುತ್ತೇವೆ.

ಅಪಘಾತ ಆದ ಸಮಯದಲ್ಲಿ ದ್ವಿಚಕ್ರ ವಾಹನವನ್ನು ನಾನೇ ಚಾಲನೆ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಆ ದ್ವಿಚಕ್ರ ವಾಹನವನ್ನು ನಾನೇ ಚಾಲನೆ ಮಾಡುತ್ತಿದ್ದರೂ ಸಹ ನನಗೆ ಚಾಲನಾ ಪರವಾನಗಿ ಇಲ್ಲದೆ ಇದ್ದ ಕಾರಣ ನನ್ನ ಅಣ್ಣನ ಮಗ ಚಾಲನೆ ಮಾಡುತ್ತಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದಲ್ಲಿ ನನ್ನ ಅಣ್ಣನ ಮಗನಿಗೆ ಸಣ್ಣ ಪುಟ್ಟ ತರಚಿದ ಗಾಯಗಳಾಗಿದ್ದವು.

ಅಪಘಾತ ಆದ ನಂತರ ಮೊದಲು ನಾಗರಾಜೇಗೌಡ ಮೆಮೋರಿಯಲ್ ಆಸ್ಪತ್ರೆಗೆ ಹೋದೆ. ಅಪಘಾತ ಆದ ಸ್ಥಳಕ್ಕೂ ಮತ್ತು ಸಾರ್ವಜನಿಕ ಆಸ್ಪತ್ರೆಗೂ ಕಡಿಮೆ ಅಂತರ ಇತ್ತು ಎಂದರೆ ಸರಿ. ನಾನು ಹೇಳಿದ ರೀತಿಯಲ್ಲಿ ಅಪಘಾತ ಆಗಿದ್ದಿದ್ದರೆ ಮೊದಲು ಹತ್ತಿರದ ಸಾರ್ವಜನಿಕ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಪಡೆದುಕೊಂಡು ಆನಂತರ ಬೇರೆ ಕಡೆ ಹೋಗುತ್ತಿದ್ದೆ ಎಂದರೆ ಸರಿಯಲ್ಲ. ಹತ್ತಿರದ ಸಾರ್ವಜನಿಕ ಆಸ್ಪತ್ರೆಗೆ ಹೋಗದೆ ನಾಗರಾಜೇಗೌಡ ಆಸ್ಪತ್ರೆಗೆ ಹೋಗಿರುವ ಉದ್ದೇಶವೇ ಸುಳ್ಳು ಎಂ ಎಲ್ ಸಿ ದಾಖಲು ಮಾಡುವುದು ಆಗಿತ್ತು ಎಂದರೆ ಸರಿಯಲ್ಲ. ದ್ವಿಚಕ್ರ ವಾಹನವನ್ನು ನನ್ನ ಅಣ್ಣನ ಮಗನು ಓಡಿಸದೆ ಇದ್ದ ಕಾರಣ ಆತನಿಗೆ ಯಾವುದೇ ರೀತಿಯ ಗಾಯಗಳಾಗಿಲ್ಲ ಮತ್ತು ಅದಕ್ಕೆ

ಸಂಬಂಧಿಸಿದಂತೆ ಚಿಕಿತ್ಸೆಯನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನನ್ನ ಅಣ್ಣನ ಮಗ ಚಿಕಿತ್ಸೆ ಪಡೆದುಕೊಂಡಿರುವ ಬಗ್ಗೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ.

ಅಪಘಾತದಲ್ಲಿ ನಾನು ಬಿದ್ದಾಗ ಪ್ರಜ್ಞೆ ಇತ್ತು. ನಾಗರಾಜೇಗೌಡ ಮೆಮೋರಿಯಲ್ ಆಸ್ಪತ್ರೆಗೆ ಹೋದಾಗ ನನಗೆ ಆದ ಗಾಯಗಳ ಬಗ್ಗೆ ನಾನು ಮಾಹಿತಿ ನೀಡಿಲ್ಲ ಬರೆಸಿಲ್ಲ. ನಾನು ಅಪಘಾತದಲ್ಲಿ ಬಿದ್ದಾಗ ನನ್ನನ್ನು ಪರಿಚಯಸ್ಥರು ಉಪಚರಿಸಿದ್ದಾರೆ ಎಂದರೆ ಸರಿ, ನನ್ನ ಪರಿಚಯಸ್ಥರೇ ನನ್ನ ಅಣ್ಣನನ್ನು ಕರೆಸಿದ್ದರು. ನಾನೇ ಸ್ವತಃ ಬಿದ್ದು ಗಾಯಗೊಂಡಿದ್ದರೂ ಸಹ ಹೇಗಾದರೂ ಮಾಡಿ ಪರಿಹಾರ ಪಡೆಯಬೇಕು ಎಂಬ ಕಾರಣದಿಂದ ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ.

ನಾಗರಾಜೇಗೌಡ ಮೆಮೋರಿಯಲ್ ಆಸ್ಪತ್ರೆಯಲ್ಲಿ ನನಗೆ ಶಸ್ತ್ರ ಚಿಕಿತ್ಸೆ ಮಾಡಿದ್ದಾರೆ. ನನಗೆ ಯಾವುದೇ ಶಸ್ತ್ರ ಚಿಕಿತ್ಸೆ ನಡೆದಿಲ್ಲ ಎಂದರೆ ಸರಿಯಲ್ಲ. ನಾನು ಒಂದು ವರ್ಷಗಳ ಕಾಲ ವಿಶ್ರಾಂತಿ ಪಡೆದಿಲ್ಲ ಎಂದರೆ ಸರಿಯಲ್ಲ. ಹಾಗೆಯೇ ನಾನು 15 ದಿನಗಳಿಗೊಮ್ಮೆ ಮುಂದುವರಿದ ಚಿಕಿತ್ಸೆ ಪಡೆದಿರುವ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಔಷದೋಪಚಾರಕ್ಕಾಗಿ ರೂ. 1 ಲಕ್ಷ ಖರ್ಚು ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಔಷದೋಪಚಾರಕ್ಕಾಗಿ ರೂ. 1 ಲಕ್ಷ ಖರ್ಚು ಮಾಡಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಚಿಕಿತ್ಸೆ ಪಡೆಯುತ್ತಿದ್ದ ಸಮಯದಲ್ಲಿ ಸಹಾಯಕರನ್ನು ನೇಮಿಸಿಕೊಂಡ ಬಗ್ಗೆ ಮತ್ತು ಅವರಿಗೆ ಪ್ರತಿದಿನ ಊಟ ಮತ್ತು ತಿಂಡಿಗಾಗಿ ರೂ. 400 ನೀಡುತ್ತಿದ್ದ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಹೊರರೋಗಿಯಾಗಿ ಚಿಕಿತ್ಸೆ ಪಡೆಯಲು ಕಾರು ಬಾಡಿಗೆ ಮತ್ತು ಔಷದೋಪಚಾರಕ್ಕಾಗಿ ಪ್ರತಿಬಾರಿ ರೂ. 4 ಸಾವಿರ ಖರ್ಚು ಮಾಡಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಹಾಗೆಯೇ ಮುಂದುವರಿದ

ಚಿಕಿತ್ಸೆಗಾಗಿ ರೂ. 60 ಸಾವಿರ ಇದೆ ಎಂಬ ಬಗ್ಗೆ ವೈದ್ಯರು ಯಾವುದೇ ದಾಖಲೆಗಳನ್ನು ನೀಡಿಲ್ಲ ಎಂದರೆ ಸರಿಯಲ್ಲ.

ಈಗ ಒಂದು ವರ್ಷದ ಹಿಂದೆ ವೈದ್ಯರು ಬಳಿ ಚಿಕಿತ್ಸೆ ಪಡೆಯಲು ಹೋಗಿದ್ದೆ. ಆಗ ಚಕ್ ಎಕ್ಸರೇ ಮಾಡಿದರು. ಆ ಚೆಕ್ ಎಕ್ಸರೇ ಪ್ರಕಾರ ಮುರಿದ ಮೂಳೆಗಳು ಸಂಪೂರ್ಣವಾಗಿ ಕೂಡಿಕೊಂಡಿವೆ ಎಂದು ವರದಿ ಇದೆ ಎಂದರೆ ಸರಿಯಲ್ಲ. ನಾನು ಆರೋಗ್ಯದಿಂದ ಇದ್ದು ನನಗೆ ಯಾವುದೇ ಶಾಶ್ವತ ಅಂಗನ್ಯೂನತೆ ಇಲ್ಲದೆ ಇದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಹೇಗಾದರೂ ಮಾಡಿ ಪರಿಹಾರ ಪಡೆಯಬೇಕು ಎಂಬ ದುರುದ್ದೇಶದಿಂದ ಪರಸ್ಪರ ಷರೀಕ್ಕಾಗಿ ಸಮಾಲೋಚನೆ ನಡೆಸಿ 4 ದಿನ ತಡವಾಗಿ ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ನಾನೇ ಎಲ್ಲೋ ಬಿದ್ದು ಗಾಯ ಮಾಡಿಕೊಂಡಿರುವ ಕಾರಣ 2 ನೇ ಎದುರುದಾರರು ನನಗೆ ಪರಿಹಾರ ನೀಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

***ಸಾ ಓ ಹೇ ಸ ಒ***

**(ಬಾಬು ಎನ್)**
**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಪಾಂಡವಪುರ**